ಮಗುವಿನ ತಂದೆ. ಆ ಹುಡುಗಿ ಈ ಮದುವೇನಾ ಮನಃಪೂರ್ವಕವಾಗಿ ಒಪ್ಕೊಂಡಿದ್ದಾಳೋ ಇಲ್ವೋ' ಅಂತ ಅನುಮಾನಿಸಿದ್ರಂತೆ. ಅದ್ಕೆ ನಿಮ್ಮ ಜೊತೆ ಮಾತನಾಡೋಕೇಂತ ಅವರು ನನ್ನನ್ನು ಕಳುಹಿಸಿದ್ದು' ಎಂದು ಸವಿತಾ ನಿಧಾನಕ್ಕೆ ವಿಷಯದ ವಿವರಣೆಯನ್ನು ನೀಡಿದಾಗ, ಕರುಣಾಕರ ನಿಡುಸುಯ್ದು, ಕೈಯಲ್ಲಿದ್ದ ಟೀ ಲೋಟವನ್ನು ಅಲ್ಲೇ ಪಕ್ಕದಲ್ಲಿದ್ದ ಟೀಪಾಯಿ ಮೇಲಿಟ್ಟು ಹಾಸಿಗೆಯ ಮೇಲೆ ಕುಳಿತು, 'ಕೂತ್ಕೊಳ್ಳಿ' ಎಂದು ಅವಳಿಗೆ ತನ್ನ ಮುಂದಿದ್ದ ಕುರ್ಚಿಯನ್ನು ತೋರಿದನು. ಸವಿತಾ ನಿಧಾನಕ್ಕೆ ಬಂದು ಅವನ ಮುಂದಿದ್ದ ಕುರ್ಚಿಯಲ್ಲಿ ಆಸೀನಳಾದಳು.

'ನೋಡಿ ನನಗಂತೂ ಮತ್ತೆ ಮದುವೆಯಾಗುವ ಆಸಕ್ತಿಯೇ ಇಲ್ಲ. ಅಮ್ಮಾ, ಖುಷಿ ಹೆಣ್ಣು ಮಗು, ಮುಂದೆ ಅವಳಿಗೊಬ್ಬ ತಾಯಿಬೇಕು, ಅವಳ ಸಲುವಾಗಿಯಾದ್ರು ಮದುವೆಯಾಗೂಂತ ಒತ್ತಾಯಿಸ್ತಿದ್ದಾರೆ... ನಿಮಗೆ ನಿಮ್ಮದೇ ಆಗಿರುವಂತಹ ಕನಸುಗಳಿರಬಹುದು. ಸುಮ್ನೆ ಒಂದು ಮಗುವಿನ ತಂದೆಯಾಗಿರೋ ನನ್ನನ್ನು ಮದುವೆಯಾಗಿ ನೀವ್ಯಾಕೆ ನಿಮ್ಮ ಆಸೆ, ಆಕಾಂಕ್ಷೆಗಳಿಗೆ ಬೆಂಕಿ ಹಚ್ಕೋಬೇಕು. ಮೂವತ್ತೆರಡು ಅಂತ ದೊಡ್ಡ ವಯಸ್ಸೇನಲ್ಲ. ನಿಮಗೆ ಒಳ್ಳೆಯ ವರನೇ ಸಿಕ್ತಾನೆ ಅನ್ನೋದು ನನ್ನ ನಂಬಿಕೆ' ಎನ್ನುತ್ತಾ ಕರುಣಾಕರ ಮುಗುಳ್ನಕ್ಕನು.

'ನನ್ನ ಆಸೆ, ಕನಸುಗಳೆಲ್ಲಾ ಮೊದಲು ನಿಶ್ಚಯವಾದ ವರನ ಸಾವಿನ ಹಿಂದೆಯೇ ಹೋಗಿ ಸಮಾಧಿಯಾಗಿದೆ. ಮದುವೆಯಾಗಲೇ ಬೇಕೆನ್ನುವ ಹಂಬಲ ನನ್ನಲ್ಲೂ ಉಳಿದಿಲ್ಲ. ಮಗಳಿಗೊಂದು ಮದುವೆಯಾಗಿಲ್ಲ ಎಂದು ಈ ಇಳಿ ವಯಸ್ಸಿನಲ್ಲಿ ಕೊರಗುತ್ತಿರುವ ನನ್ನ ಅಪ್ಪ, ಅಮ್ಮನನ್ನು ನನ್ನ ಕಣ್ಣೆಂದ ನೋಡೋಕಾಗ್ತಿಲ್ಲ... ಮತ್ತೆ ನೀವು ನನ್ನ ಅಕ್ಕನಿಗೆ ಗೊತ್ತಿರೋರೆ... ಎರಡನೇ ಸಂಬಂಧಾಂತ ನನಗೇನು ಬೇಸರವಿಲ್ಲ. ಆ ಬಗೆಯಲ್ಲಿ ನೀವೇನು ಬೇಸರಪಟ್ಟುಕೊಳ್ಳುವ ಕಾರಣವೇ ಇಲ್ಲ' ಎಂದು ಸವಿತಾ ತನ್ನ ಮನಸ್ಸನ್ನು ಮುಕ್ತವಾಗಿ ತೆರೆದಿಟ್ಟಾಗ, ಕರುಣಾಕರ ಹೇಗೆ ಪ್ರತಿಕ್ರಿಸಬೇಕೆಂದು ಅರಿವಾಗದೆ, 'ಅದೂ ಹಾಗಲ್ಲ... ನನ್ನ ಮೊದಲನೇ ಹೆಂಡತಿ...' ಎಂದು ತೊದಲುತ್ತಾ ಮಾತು ನಿಲ್ಲಿಸಿದನು.

'ನೀವೇನೂ ಯೋಚ್ನೆ ಮಾಡ್ಬೇಡಿ. ನಿಮ್ಮ ಮೊದಲನೇ ಹೆಂಡತಿಗೆ ಬೇರೊಬ್ಬನ ಜೊತೆ ಅಫೇರ್ ಇದ್ದು, ನಂತರ ಆಕೆ ಮತ್ತು ಆತ ಜೊತೆಯಾಗಿಯೇ ಆತ್ಮಹತ್ಯೆ ಮಾಡ್ಕೊಂಡಿದ್ದು ಇದೆಲ್ಲವೂ ನನಗೆ ಗೊತ್ತಿರೋ ವಿಷಯಾನೆ' ಎಂದವಳು ತನಗೆಲ್ಲಾ ವಿಚಾರವು ತಿಳಿದಿರುವುದೇ ಆಗಿದೆ ಎಂಬಂತೆ ಸರಾಗವಾಗಿ ಮಾತನಾಡಿದಳು. ಆದರೆ ಕರುಣಾಕರನಿಗೆ ಮಾತು ಕಟ್ಟಿದಂತಾಗಿತ್ತು. ಗೆಳೆಯ ರಾಜೇಶ ಹೇಳಿದ ಮಾತುಗಳು ನೆನಪಾದವು. 'ತಾನೆಲ್ಲಿ ಮತ್ತೆ ಪರಿಸ್ಥಿತಿಯ ಕೈಗೊಂಬೆಯಾಗಿ ಆಕೆಯನ್ನು ಮದುವೆಯಾಗಬೇಕಾಗಿ ಬರುವುದೋ' ಅನ್ನುವ ಭಯ ಕಾಡಲಾರಂಭಿಸಿತು. ಒಮ್ಮೆಲೆ ಎಲ್ಲವನ್ನು ಹೇಳುವ ಧೈರ್ಯವಿಲ್ಲ.

'ಸವಿತಾ... ಸವಿತಾ...' ಕರುಣಾಕರ ಯೋಚಿಸುತ್ತಿದ್ದಂತೆ ಹೊರಗಿನಿಂದ ಶಾರದಮ್ಮ ಕೂಗಿದ್ದರು.

'ಓ... ಬಂದೆ' ಎಂದೆನ್ನುತ್ತಾ ಸವಿತಾ ಎದ್ದು ನಿಂತಳು.

'ಒಂದ್ನಿಷ' ಕರುಣಾಕರ ಅವಳನ್ನು ತಡೆದನು. ಅವಳು ನಿಂತಲ್ಲಿಯೇ ಅವನೆಡೆ ಪ್ರಶ್ನಾರ್ಥಕ ನೋಟ ಬೀರಿದಳು.

'ಅದೂ... ನಾನು ನಿಮ್ಮ ಜೊತೆ ಮಾತನಾಡ್ಬೇಕು. ನಾಳೆ ಹೇಗಿದ್ರು ರಜೆ ಇದೆ. ಮನೆಯಲ್ಲಿ ಬೇಡ. ನೀವು ಹತ್ತು ಗಂಟೆ ಮೇಲೆ ರೆಡಿಯಾಗಿ ಬಂದ್ರೆ ನಾವಿಬ್ರು ಹೊರಗೆಲ್ಲಾದ್ರು ಹೋಗಿ ಮಾತ್ನಾಡಿಕೊಂಡು ಬರೋಣ' ಕರುಣಾಕರ ನುಡಿದಾಗ ಸವಿತಾಳ ಮುಖದಲ್ಲಿ ಸಂಭ್ರಮದ ತಿಳಿನಗೆಯರಳಿತು. ಅವಳು ಕಣ್ಣುಗಳನ್ನರಳಿಸಿ,

'ಹೊರಗಡೆ ಹೋಗಿ ಮಾತ್ನಾಡಿಕೊಂಡು ಬರೋದಾ?' ಅನುಮಾನದಿಂದ ಕೇಳಿದಳು.

'ಹೌದು'

'ಸರಿ, ಆಗ್ಲೀ... ಬರ್ತೇನೆ' ಎಂದವಳು, ಕರುಣಾಕರ ಆಗಲೆಂಬಂತೆ ತಲೆಯಾಡಿಸಿದ್ದೇ ಕುಣಿಯುವ ಹೆಜ್ಜೆಗಳನ್ನಿಡುತ್ತಾ ಹೊರನಡೆದಳು.

'ನಿನ್ನ ಅಕ್ಕಾ ಕರೀತಿದ್ಲು, ಅದ್ಕೇ ಕೂಗ್ದೆ' ಸವಿತಾ ಹೊರಬಂದಿದ್ದೇ ಶಾರದಮ್ಮನವರು ನುಡಿದರು.

'ಹೌದು, ತುಂಬಾ ಹೊತ್ತಾಯಿತು ನಾನು ಬಂದು. ಬರ್ತೇನೆ' ಎಂದೆನ್ನುತ್ತಾ ಅವಳು ಅಜ್ಜಿಯ ಪಕ್ಕಕ್ಕೆ ನಿಂತಿದ್ದ ಖುಷಿಯ ಕೆನ್ನೆ ಸವರಿ ಕುಣಿಯುವ ಹೆಜ್ಜೆಯೊಂದಿಗೆ ಅಲ್ಲಿಂದ ನಿರ್ಗಮಿಸಿದಳು.

ಕರುಣಾಕರನ ಕೋಣೆ ಹೊಕ್ಕು, ಇದೀವಾಗ